**ದಿಃ-23-11-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲು : ಪ್ರತಿವಾದಿ ಪರ ಶ್ರೀ. ಎಸ್.ಆರ್.ಆರ್ ವಕೀಲರಿಂದ :**

ನನ್ನ ಪ್ರಕಾರ ಈ ಕರಾರು ಪತ್ರದ ಅಡಿಯಲ್ಲಿ ನಾನು ಬ್ಯಾಂಕ್ ಲೋನನ್ನು ಸೇರಿಸಿ ರೂ.1,40,00,000/- ಕೊಡಬೇಕಾಗಿದೆ. ಈ ಪ್ರಕಾರವಾಗಿ ನಮ್ಮ ಕರಾರು ಪತ್ರದಲ್ಲಿ ಬ್ಯಾಂಕ್ ಲೋನನ್ನು ಸೇರಿಸಲಾಗಿದೆ ಎಂಬ ವಿಚಾರವನ್ನು ಬರೆಯಲಾಗಿದೆ. ನನ್ನ ಪ್ರಕಾರ ಕರಾರು ಪತ್ರವಾಗುವ ಸಂದರ್ಭದಲ್ಲಿ ಎಷ್ಟು ಬ್ಯಾಂಕ್ ಲೋನ್ ಇತ್ತು ಎಂದು ಅವರು ನನಗೆ ತಿಳಿಸಿರಲಿಲ್ಲ. ಸಾಕ್ಷಿಗೆ ನಿ.ಪಿ.1 ನ್ನು ತೋರಿಸಿ ಬ್ಯಾಂಕ್ ಲೋನನ್ನು ತೀರಿಸಬೇಕೆಂಬ ಉಲ್ಲೇಖ ಎಲ್ಲಿದು ಎಂದು ತೋರಿಸುವಂತೆ ಕೇಳಿದಾಗ ಸಾಕ್ಷಿಯು ದಾಖಲೆ ನಿ.ಪಿ.1 ನ್ನು ಪರಾಂಬರಿಸಿ ಪುಟ ಸಂಖ್ಯೆ 1 ಖಂಡಿಕೆ 2 ರಲ್ಲಿ ಬರೆದಿರುತ್ತದೆ ಎಂದು ತೋರಿಸುತ್ತಾರೆ. ನಂತರದ ದಿನಗಳಲ್ಲಿ ಪ್ರತಿವಾದಿಗಳು ಆ ಬ್ಯಾಂಕ್ ಲೋನನ್ನು ತೀರಿಸಿದ್ದಾರೆಯೇ ಎಂದರೆ ಆ ಬಗ್ಗೆ ನನಗೆ ತಿಳಿದಿಲ್ಲ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿದಂತಹ ನನ್ನ ಬ್ಯಾಂಕ್ ಖಾತೆಗಳ ಹಾಳೆಗಳು ಈ ಕರಾರು ಪತ್ರ ಮಾಡುವ ಸಂದರ್ಭದಲ್ಲಿ ಚಾಲ್ತಿಯಲ್ಲಿತ್ತು.

ಮೇಘನಾ ಆಗ್ರೋ ಟ್ರೇಡಿಂಗ್ ಕಂಪೆನಿ ಅದು ಯಾವಾಗ ಪ್ರಾರಂಭಿಸಿದ್ದೇನೆ ಎಂದು ನನಗೆ ಈಗ ಸರಿಯಾಗಿ ನೆನಪಾಗುತ್ತಿಲ್ಲ. ಈ ಕಂಪೆನಿಯನ್ನು ಪ್ರಾರಂಭಿಸಿದ ಬಗ್ಗೆ ನನ್ನಲ್ಲಿ ದಾಖಲೆಗಳು ಇವೆ. ನಿ.ಪಿ.24 ನ್ನು ತೆಗೆದುಕೊಳ್ಳುವ 3-4 ವರ್ಷಗಳ ಹಿಂದೆ ಈ ಕಂಪೆನಿ ಪ್ರಾರಂಭವಾಗಿರಬೇಕು. ಈ ಕಂಪೆನಿ ಈಗಲೂ ಊರ್ಜಿತದಲ್ಲಿದೆ. ಈ ಕಂಪೆನಿಗೆ ಸಂಬಂಧಿಸಿ ಜಿ.ಎಸ್.ಟಿ ರಿಟರ್ನ್ಸ್ ನನ್ನಲ್ಲಿ ಇರುತ್ತದೆ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿದ ಎಲ್ಲಾ ಖಾತೆಗಳನ್ನು ಸೇರಿಸಿ ನೋಡಿದಾಗ 2014 ರಲ್ಲಿ ಒಟ್ಟು ಎಷ್ಟು ಹಣವಿತ್ತು ಎಂದು ನನಗೆ ಈಗ ಹೇಳಲಾಗುವುದಿಲ್ಲ. ನಾನು ನಿ.ಪಿ.2 ಮತ್ತು 11 ನೋಟಿಸನ್ನು ಪ್ರತಿವಾದಿಗಳಿಗೆ ಕೊಡುವ ಸಂದರ್ಭದಲ್ಲಿ ನನ್ನಲ್ಲಿ

ಬ್ಯಾಂಕ್ ಬ್ಯಾಲೆನ್ಸ್ ಮತ್ತು ಕೈಯಲ್ಲಿ ನಗದು ಇತ್ತು. ಈ ನೋಟೀಸು ಕೊಡುವ ಸಂದರ್ಭದಲ್ಲಿ ನನ್ನ ಬ್ಯಾಂಕ್ ಖಾತೆಗಳ ವಿವರ ಮತ್ತು ಹಣದ ವಿವರಗಳನ್ನು ನೀಡಿ ನಾನು ನನ್ನ ಪಾಲಿನ ಕರಾರನ್ನು ಮಾಡಲು ತಯಾರಿದ್ದೇನೆ ಎಂದು ಅದರಲ್ಲಿ ಬರೆದಿಲ್ಲ ಆದರೆ ನಾನು ನನ್ನಲ್ಲಿ ಹಣವಿದೆ ಮತ್ತು ನಾನು ನನ್ನ ಪಾಲಿನ ಕರಾರನ್ನು ಮಾಡಲು ತಯಾರಿದ್ದೇನೆ ಎಂದು ಬರೆದಿದ್ದೇನೆ. ನಿ.ಪಿ.2 ರಲ್ಲಿ ಪ್ರತಿವಾದಿಗಳಲ್ಲಿ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಕೊಡಿ ಅದರ ಮೇಲೆ ಬ್ಯಾಂಕ್ ನಲ್ಲಿ ಸಾಲ ಪಡೆಯಬೇಕೆಂದು ಬರೆದಿದ್ದೇನೆ ಎಂದರೆ ಸರಿ.

ನಿ.ಪಿ.20 ರ ಬ್ಯಾಂಕ್ ಹಾಳೆಯ ಪ್ರಕಾರ 30.11.2014 ರಂದು ನನ್ನ ಬ್ಯಾಂಕ್ ಖಾತೆಯಲ್ಲಿ ರೂ.1,60,000/-ವಿತ್ತು. ನಿ.ಪಿ.21 ರ ಖಾತೆಗೆ ಸಂಬಂಧಿಸಿ 2014-15 ರ ಬ್ಯಾಂಕ್ ಸ್ಟೇಟ್ ಮೆಂಟ್ ಹಾಜರು ಪಡಿಸಬಹುದೇ ಎಂಬ ಪ್ರಶ್ನೆಗೆ ಸಾಕ್ಷಿಯು ಅದು ನನ್ನ ಬಳಿ ಇಲ್ಲ ಎಂದು ನುಡಿಯುತ್ತಾರೆ. ನಾನು ಸಲ್ಲಿಸಿರುವ ನಿ.ಪಿ.21 ರಿಂದ 23 ದಾಖಲೆಗಳು ಈ ದಾವೆಯನ್ನು ಸಲ್ಲಿಸಿದ ನಂತರದ ದಾಖಲೆಗಳು ಎಂದರೆ ಸರಿ. ನಿ.ಪಿ.22 ಮತ್ತು 23 ರ ಬ್ಯಾಂಕ್ ಖಾತೆಗಳು 2014 ನೇ ಇಸವಿಯಲ್ಲಿ ಚಾಲ್ತಿಯಲ್ಲಿದ್ದವು ಎಂಬ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಬಹುದೇ ಎಂದು ಕೇಳಿದಾಗ ಸಾಕ್ಷಿಯು ಆ ಖಾತೆಗಳ ಮುಖಾಂತರವೇ ನಾನು ಪ್ರತಿವಾದಿಗಳಿಗೆ ಡಿಡಿಯನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ರೂ.5,00,000/- ಮುಂಗಡ ಹಣವನ್ನಾಗಿ ಡಿಡಿ ಮುಖಾಂತರ ಪ್ರತಿವಾದಿಗೆ ನೀಡಿದ್ದು ಅದನ್ನು ನಾನು ನನ್ನ ಯಾವ ಖಾತೆಯಿಂದ ನೀಡಿರುತ್ತೇನೆ ಎಂದು ನನಗೆ ಈಗ ನೆನಪಾಗುತ್ತಿಲ್ಲ. ನನ್ನ ಕರ್ನಾಟಕ ಬ್ಯಾಂಕಿನ ಖಾತೆಯಲ್ಲಿ 2014 ನೇ ಇಸವಿಯಲ್ಲಿ ರೂ.42,000/-ವಿತ್ತು. ಮಾರ್ಚ್ 2016 ರ ದಾವೆಯನ್ನು ಹೂಡುವ ಸಂದರ್ಭದಲ್ಲಿ ನನ್ನ ಖಾತೆಗಳಲ್ಲಿ ಎಷ್ಟು ಹಣವಿತ್ತು ಎಂದು ನನಗೆ ಈಗ ನೆನಪಿಲ್ಲ. ನಾನು ದಾವೆ ಹಾಕುವ

ಸಂದರ್ಭದಲ್ಲಿ ನನ್ನ ಬ್ಯಾಂಕಿನ ಖಾತೆಯಲ್ಲಿ ರೂ.1,40,00,000/- ಇತ್ತೇ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ಕೈಯಲ್ಲಿದ್ದ ಹಣವನ್ನು ಸೇರಿ ಅದಕ್ಕಿಂತ ಜಾಸ್ತಿ ಇತ್ತು ಎಂದು ನುಡಿಯುತ್ತಾರೆ.

**ಪ್ರಶ್ನೆ 1 :** ಆ ಸಮಯದಲ್ಲಿ ನಿಮ್ಮ ಬಳಿ ಎಷ್ಟು ನಗದು ಇತ್ತು?

**ಉತ್ತರ :** ಆ ಸಂದರ್ಭದಲ್ಲಿ ನನ್ನ ಬಳಿ ಇದ್ದ ಹಣವನ್ನು ಬಹಿರಂಗ ಪಡಿಸಲು ಸಾಧ್ಯವಿಲ್ಲ.

**ಪ್ರಶ್ನೆ 2 :** ಆ ಸಮಯದಲ್ಲಿ ನಿಮ್ಮ ಬಳಿ ಬ್ಯಾಂಕ್ ಖಾತೆಯಲ್ಲಿ ಒಟ್ಟು ಎಷ್ಟು ಹಣವಿತ್ತು?

**ಉತ್ತರ :** ನನಗೆ ಈಗ ನೆನಪಿಲ್ಲ.

**ಪ್ರಶ್ನೆ 3 :** 2014 ರಲ್ಲಿ ನನ್ನಲ್ಲಿದ್ದ ಎಲ್ಲಾ ಬ್ಯಾಂಕ್ ಗಳ ಖಾತೆಗಳ ಹಾಳೆಗಳನ್ನು ನ್ಯಾಯಾಲಯಕ್ಕೆ ತಂದು ಹಾಜರುಪಡಿಸಬಹುದೇ?

**ಉತ್ತರ :** ಹಾಜರು ಪಡಿಸಬಹುದು.

2014 ನವೆಂಬರ್ ತಿಂಗಳಲ್ಲಿ ನನ್ನ ಬಳಿ ರೂ.1,40,00,000/- ಬ್ಯಾಂಕ್ ಖಾತೆಗಳಲ್ಲಾಗಲೀ ಅಥವಾ ನಗದಲ್ಲಾಗಲೀ ಇರಲಿಲ್ಲ ಎಂದರೆ ಸರಿಯಲ್ಲ. ನಿ.ಪಿ.1 ಕರಾರು ಆದಾಗ ಎಲ್ಲಾ ಹಣವನ್ನು ಚೆಕ್ಕು ಮುಖಾಂತರವೇ ನೀಡಬೇಕೆಂದು ತಿಳಿಸಿದ್ದರು ಎಂದರೆ ಸರಿಯಲ್ಲ. ನನ್ನಲ್ಲಿ ಹಣವಿದ್ದಾಗ ಪುನಃ ಕರ್ನಾಟಕ ಬ್ಯಾಂಕಿನಿಂದ ಲೋನು ಪಡೆಯುವ ಅವಶ್ಯಕತೆ ಏನಿತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ರೂ.1,40,00,000/- ನನ್ನ ವ್ಯಾಪಾರದ ಹಣ ಎಂದು ನುಡಿಯುತ್ತಾರೆ. ಆ ರೀತಿ ನನ್ನಲ್ಲಿ ವ್ಯಾಪಾರದ ಹಣ ಇರಲಿಲ್ಲ ಎಂದರೆ ಸರಿಯಲ್ಲ.

ನಾನು ಆಗ್ರೋ ವ್ಯಾಪಾರ ಮಾಡುತ್ತಿದ್ದೇನೆಂದು ಹೇಳಿದ್ದು ಅದರ 2014-15 ರ ಸಾಲಿನ ವ್ಯಾಪಾರ ಮತ್ತು ವಹಿವಾಟು ಸುಮಾರು 8 ಕೋಟಿ ಇತ್ತು. ಈ

ವಹಿವಾಟುಗಳ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಲು ನನಗೆ ತೊಂದರೆ ಇದೆ. 2014 ರಲ್ಲಿ ನಾನು ಆಗ್ರೋ ವ್ಯಾಪಾರ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಈ ವ್ಯಾಪಾರದ ಆದಾಯ ತೆರಿಗೆಯ ಬಗ್ಗೆ ಐಟಿ ರಿಟರ್ನ್ಸ್ ಅನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗುವುದಿಲ್ಲ. ಅಂತಹ ಯಾವುದೇ ವ್ಯವಹಾರಗಳು ಇಲ್ಲದೇ ಇದ್ದುದ್ದರಿಂದ ಮತ್ತು ಇದ್ದಿದ್ದರೇ ಐಟಿ ರಿಟರ್ನ್ಸ್ ಅಲ್ಲಿ ತೋರಿಸುತ್ತಿದ್ದೆ ಎಂದರೆ ಸರಿಯಲ್ಲ.

ನಿ.ಪಿ.25 ರ ದಾಖಲಾತಿ ಪ್ರಕಾರ ದಿನಾಂಕ 30.11.2014 ರಂದು ರೂ.8,98,000/- ಇತ್ತು. ನಿ.ಪಿ.26 ರ ದಾಖಲಾತಿ ಪ್ರಕಾರ ದಿನಾಂಕ 30.11.2014 ರಂದು ರೂ.20,000/- ಇತ್ತು. ನಾನು ನಿ.ಪಿ.20 ರಿಂದ 26 ದಾಖಲೆಗಳನ್ನು ಹಾಜರು ಪಡಿಸಿದ್ದು ಆ ದಾಖಲೆಗೂ ಈ ದಾವೆಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನನ್ನ ಮೇಘನಾ ಆಗ್ರೋ ಟ್ರೇಡಿಂಗ್ ಕಂಪೆನಿಯ ನೊಂದಣಿ ಪ್ರಮಾಣ ಪತ್ರವನ್ನು ಹಾಜರು ಪಡಿಸಬಹುದು. ನಿ.ಪಿ.24 ನ್ನು ನಾನು ಈ ದಾವೆಗೋಸ್ಕರ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಈ ದಾವೆಯನ್ನು ಹೂಡುವ ಸಂದರ್ಭದಲ್ಲಿ ನನ್ನ ಬಳಿ ರೂ.1,40,00,000/- ಇರಲಿಲ್ಲ ಮತ್ತು ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ :** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೇ.ಸರಿ ಇದೆ,

(ಮಮ್ತಾಜ್)
9 ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು, ಬೆಂಗಳೂರು.